ದಕ್ಷಿಣ ಕನ್ನಡದಲ್ಲಿ ಬಸ್ಸಿನ ಸೌಕರ್ಯ

619 - ಡಾ।। ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡದಲ್ಲಿ ಸಂಚರಿಸುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಯಾವ ಯಾವ ವಿಶೇಷ ಸೌಲಭ್ಯ ಒದಗಿಸಲಾಗಿದೆ?

ಆ) ಕೆಎಸ್‌ಆರ್‌ಟಿಸಿಯ ಮೂಲ ಉದ್ದೇಶ ಯಾವುವು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಯಾವುದೇ ವಿಶೇಷ ಸೌಲಭ್ಯವನ್ನು ಒದಗಿಸಲಾಗಿರುವುದಿಲ್ಲ.

ಆ) ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಕರ್ಯವನ್ನು ಆದಷ್ಟು ಕಡಿಮೆ ದರದಲ್ಲಿ ನಿಯಮಿತವಾಗಿ ಮತ್ತು ಸಂಪೂರ್ಣ ನಿಯೋಜಿತ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಡುವುದು.

ನಾಮನಿರ್ದೇಶನ ಮಾಡುವ ವಿಷಯದಲ್ಲಿ ಸರ್ಕಾರದ ಧೋರಣೆ

620 - ಡಾ: ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಸಂಘಗಳಿಗೆ ನಾಮ ನಿರ್ದೇಶನ ಮಾಡುವ ವಿಷಯದಲ್ಲಿ ಸರಕಾರದವರ ಧೋರಣೆ ಏನು?

ಆ) ಪಿ.ಎಂ.ಸಿ. ಯಲ್ಲಿ ಈ ಧೋರಣೆ ಪ್ರತಿಫಲಿಸಿದೆಯೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಪ್ರಸ್ತುತ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 29 ಮತ್ತು ಕಲಂ 53 ಎ ಪ್ರಕಾರ ಸರ್ಕಾರದ ನೆರವು ಅಂದರೆ ಷೇರುಧನ ಅಥವಾ ಗ್ಯಾರಂಟಿ ಪಡೆದ ಸಹಕಾರ ಸಂಘಗಳಿಗೆ ನಾಮನಿರ್ದೇಶನ ಮಾಡಲು ಅವಕಾಶವಿದೆ.

ಕಳೆದ ವಿಧಾನ ಸಭೆಯಲ್ಲಿ ಮಂಡಿಸಿರುವ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 1997 ರಲ್ಲಿ ಕಲಂ 29ಕ್ಕೆ ತಿದ್ದುಪಡಿ ಸೂಚಿಸಿದ್ದು ನಾಮನಿರ್ದೇಶಿತವಾದ ವ್ಯಕ್ತಿಗಳು ಪದಾಧಿಕಾರಿಗಳಾಗಲು ಅರ್ಹರಾಗಿರತಕ್ಕದಲ್ಲವೆಂಬ ಅಂಶ ಸೇರಿದೆ. ಕಲಂ 53 ಎ ಯನ್ನು ಕೈ ಬಿಡಲು ಉದ್ದೇಶಿಸಿದೆ. ಸದರಿ ವಿಧೇಯಕದ ಮೇಲೆ ಇನ್ನೂ ಚರ್ಚೆ ನಡೆದಿರುವುದಿಲ್ಲ.

ಆ) ಚುನಾಯಿತ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮೂರು ಸದಸ್ಯರನ್ನು ಸರ್ಕಾರವು ನಾಮನಿರ್ದೇಶನ ಮಾಡುವ ಬಗ್ಗೆ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ)